ಅನ್ನಿಸುತ್ತೆ. ಟಾನಿಕ್ ತರಹದ್ದು ಏನಾದರೂ ಬೇಕಲ್ಲ' ಅಂದ. ಪಂಡಿತರು ಅಲ್ಲೇ ಅವನ ಕೈ ಹಿಡಿದು ನಾಡಿ ನೋಡುತ್ತ 'ಹೌದು, ಅವತ್ತು ಸ್ಟೇಷನ್ನಿನಲ್ಲಿ ನಿಮ್ಮನ್ನು ನೋಡಿದಾಗ ನನಗೂ ಹಾಗೇ ಅನ್ನಿಸ್ತು. ನಿಮಗೆ ಹೇಳಿದರೆ ಹೇಗೋ ಏನೋ ಅಂತ ಸುಮ್ಮನಿದ್ದೆ. ಈ ವಯಸ್ಸಿನಲ್ಲಿ ಇದು ಬಂದು ಹೋಗೋ ಕಾಯಿಲೆಯೇ! ಎಂದು ಹೇಳಿ ಮತ್ತೆ ಏನೂ ಯೋಚಿಸಬೇಡಿ. ಒಂದು ತಿಂಗಳು ಹಸುವಿನ ಹಾಲಲ್ಲಿ ಅಶ್ವಗಂಧಿ ಲೇಹ ತೊಗೊಂಡರೆ ಆಯಿತು. ನೋಡಿ, ಹೆಂಗೆ 'ರೊಂಯ್' ಅಂತ ಪೈಲ್ವಾನ್ ಆದ ಹಾಗೆ ಹಾಗ್ತೀರಿ' ಅಂದರು. ಸೂರಿ ಅವರ ಕೈಯಲ್ಲಿ ಐದು ರೂಪಾಯಿಟ್ಟು 'ಲೇಹ ಬೇಗ ತಯಾರಾಗ್ಬೇಕು, ಅಷ್ಟೇ' ಅಂದ. ಪಂಡಿತರು 'ಏನೂ ಯೋಚನೆ ಮಾಡ್ಬೇಡಿ. ವಾರಬಿಟ್ಟು ನಾನೇ ತಂದು ತಲಪಿಸ್ತೀನಿ' ಅಂದವರೇ 'ಇನ್ನೊಂದು ಮಾತು. ಕೈಗೆ ಕೊಂಚ ಕಡಿಮೆ ಶ್ರಮ ಕೊಡೋದು ಇಟ್ಕೊಳ್ಳಿ. ಇಲ್ಲ ಅಂದರೆ ಲೇಹ ವರ್ಕ್ ಮಾಡೋಲ್ಲ' ಎಂದು ಕೆಟ್ಟದಾಗಿ ನಗುತ್ತ ನಮಸ್ಕಾರ ಮಾಡಿ ಹೊರಟರು. ಸೂರಿಗೆ ಆ ಕ್ಷಣ ಕೊಂಚ ಸಿಟ್ಟು ಬಂದರೂ ಪಂಡಿತರು ಜೋನ್ ಹೇಳಿದ 'ವೀಕ್‌ನೆಸ್' ಮಾತನ್ನೇ ಒತ್ತಿ ಹೇಳಿದ್ದನ್ನು ಕೇಳಿ 'ಇನ್ನು ಮೇಲೆ ಹಾಳು ಮುಷ್ಟಿಮೈಥುನ ಬಿಟ್ಟು ಬಿಡಬೇಕು' ಎಂದು ನಿರ್ಧರಿಸಿದ.

ಜೋನಳನ್ನು ಕಂಡಾಗಿನಿಂದ ಸೂರಿಯ ಮನಸ್ಸು ಅವಳ ಯೋಚನೆಯನ್ನು ಬಿಟ್ಟದ್ದೇ ಇಲ್ಲ. ನಿಂತಲ್ಲಿ ಜೋನ್, ಜೋನಾ, ಜೋನಿ. ಅವಳ ಮುಖ, ಅವಳ ತುಂಟ ನಗು, ತಲೆ ಬಾಚಿಕೊಳ್ಳುತ್ತಿದ್ದಾಗ ಅಲೆ ಅಲೆಯಾಗಿ ಜಲಪಾತದಂತೆ ಕೆಳಗುರುಳುತ್ತಿದ್ದ ಅವಳ ಚೆನ್ನದ ಕೇಶರಾಶಿ. ನಾಳೆ ಅವಳೊಂದಿಗೆ ಸಂಸಾರ ಹೂಡುವುದು ಎಲ್ಲಿ? ಇಲ್ಲಿ ಬಂದಿರಲು ಅವಳು ಒಪ್ಪಿಯಾಳೆ? ಅಥವಾ ಮನೆ ಮಠ ಮಾರಿ ಲಂಡನ್ನಿಗೇ ಹೋಗುವುದೇ? ಅಲ್ಲಿಗೆ ಹೋದರೆ ಅಮ್ಮನ ಗತಿ?

ಅಲ್ಲಿಯವರೆಗೆ ಯಾವ ಹೆಣ್ಣೂ ಸೂರಿಯ ಬಾಳಿನಲ್ಲಿ ಹೊಸಿಲು ದಾಟಿ ಒಳಬಂದಿರಲಿಲ್ಲ. ನೋಡಿದ ಒಬ್ಬಿಬ್ಬರು ಬಾಗಿಲಾಚೆಯೇ ನಿಂತು ಹೋಗಿದ್ದರು. ಊರಲ್ಲಿ ಒಬ್ಬ ಸೂಳೆಯಿದ್ದಳು, ಕಾಂತಾ ಅಂತ. ಯಾರದೋ ಗ್ರಹಕೂಟದಿಂದ ಅವಳಿದ್ದುದ್ದು ಬ್ರಾಹ್ಮಣ ಕೇರಿಯಲ್ಲಿಯೇ. ತಬಲದ ಶ್ರೀನಿವಾಸ ಅವಳ ತೊತ್ತು. ಚಿಕ್ಕ ವಯಸ್ಸಿನಲ್ಲಿ ಮನೆ ಬಿಟ್ಟು ಹೋದವನು, ಬೆಂಗಳೂರಿನಲ್ಲಿ ಯಾರದೋ ನಾಟಕ ಕಂಪನಿ ಸೇರಿ, ತಬಲ–ಹಾರ್ಮೋನಿಯಂ ಕಲಿತು ಈಗ ಕಾಂತಳ ಕುಣಿತಕ್ಕೆ ಬಾರಿಸುತ್ತಿದ್ದ. ಕಂಪನಿಯಲ್ಲಿ ಎಕ್ಸ್‌ಟ್ರಾ ಆಗಿ ರಾಣಿಯರಿಗೆ ಬೀಸಣಿಗೆ ಹಿಡಿಯುತ್ತಿದ್ದವಳಿಗೆ ಮದುವೆ ಆಗುವ ಭರವಸೆ ಕೊಟ್ಟು ಅಲ್ಲಿಂದ ಹಾರಿಸಿಕೊಂಡು ಬಂದು ಮನೆಯಲ್ಲೇ ಇಟ್ಟುಕೊಂಡಿದ್ದ. ತಿಂಗಳು ಬಿಟ್ಟು ಕಸುಬಿಗೆ ಹಾಕಿದ್ದ. ಸ್ವಕಾರ್ಯ, ಸ್ವಾಮಿಕಾರ್ಯ ಎರಡೂ ನಡೆಯುತ್ತಿತ್ತು. ಸೂರಿ ಭೇಟಿಯಾದಾಗಲೆಲ್ಲ 'ಒಂದು ಸಲ ಬಂದು ಹೋಗೋ, ಅದರ ಮಜಾ ನಿನಗೇ ಗೊತ್ತಾಗುತ್ತೆ' ಅನ್ನುತ್ತಿದ್ದ. ಆ ಮಾತನ್ನು ಕೇಳಿ ಸೂರಿಗೆ ಅಸಹ್ಯವಾಗುತ್ತಿತ್ತೇ ಹೊರತು ಅಲ್ಲಿಗೆ ಹೋಗುವ ಧೈರ್ಯ ಬಂದಿರಲಿಲ್ಲ.

ಅವನ ಅರಿವಿನ ವರ್ತುಲಕ್ಕೆ ಬಂದಿದ್ದ ಇನ್ನೊಬ್ಬಳೆಂದರೆ ಮದುವೆಯಾದ ಮೂರು ತಿಂಗಳಿಗೇ ಗಂಡ ಸತ್ತ ಗೌಳಿಗರ ಬೀದಿಯ ಪುಟ್ಟ ಬಸವಿ. ಸದಾ ಮನೆಯ ಜಗಲಿಯ ಮೇಲೆ ಹಂಚಿಕಡ್ಡಿಯಿಂದ ಹಲ್ಲು ಸಂದಿಯ ಕೊಳಕು ತೆಗೆಯುತ್ತ ಹೋಗಿ ಬರುವವರನ್ನೇ ನೋಡುತ್ತ ಕೂತಿರುತ್ತಿದ್ದಳು. ಒಂದು ದಿನ ವರ್ತನೆಯ ಹಾಲಿನವನು ಬರಲಿಲ್ಲವೆಂದು ಸೂರಿಯೇ ಹಾಲು ತರಲು ಆ ಕಡೆ ಹೋದಾಗ ಅವಳು ಅವನನ್ನು ಒಡಿದು ಬಾಯಿಗೆ ಹಾಕಿಕೊಳ್ಳುವವಳಂತೆ ನೋಡಿದ್ದಳು. ಮುಂದಿನ ಸಲ ಕಂಡಾಗ ನಸುನಕ್ಕಳು. ದಿನದಿನಕ್ಕೆ ನಗು ದೊಡ್ಡದಾಗುತ್ತ ಹೋಯಿತು. ಕೊನೆಗೊಂದು ದಿನ ರಸ್ತೆಯಲ್ಲಿ ಯಾರೂ ಇಲ್ಲದ ಹೊತ್ತು ನೋಡಿ 'ಮರದಲ್ಲಿ ಒಳ್ಳೇ ಚಕ್ಕೋತ ಬಿಟ್ಟಿದೆ. ಕಿತ್ಕೊಳೋವಂತೆ ಬಾರೊ' ಎಂದು ಸೆರಗನ್ನು ಕೆಳಗೆ ಸರಿಸಿದ್ದಳು. ಮತ್ತೆರಡು ದಿನಬಿಟ್ಟು 'ಯಾಕೊ, ಬಾಲ ಮುದುಡಿಕೊಂಡು ಹೋಗ್ತೀಯಲ್ಲ ನೀನು ಷಂಡನೇನೊ' ಅಂದುಬಿಟ್ಟಳು. ಸೂರಿಗೆ ಅವಳು ತನ್ನನ್ನು ಷಂಡ ಎಂದು ಕರೆದದ್ದಕ್ಕಿಂತ ಹೆಚ್ಚಾಗಿ, ಏಕವಚನದಲ್ಲಿ 'ಹೋಗೋ', 'ಬಾರೊ' ಅಂತಾಳಲ್ಲ, ಎಷ್ಟು ಧಿಮಾಕು